**ಓಎಸ್ ನಂಃ 10/2009**

**ಡಿಡಬ್ಲೂಃ 1**

**<u>ಸಾಕ್ಷಿ ಗೆ ದಿನಾಂಕ 06-12-2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಮುಖ್ಯ ವಿಚಾರಣೆ ಪ್ರತಿವಾದಿ ಪರ ಶ್ರೀ. ವಿ.ಆರ್.ಪಿ ವಕೀಲರಿಂದ</u>**

ನಾನು ನನ್ನ ಸಾಕ್ಷ್ಯವನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ಸತ್ಯ ಮತ್ತು ನಿಜ ಇರುತ್ತದೆ ಆದ್ದರಿಂದ ಸದರಿ ನನ್ನ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಬೇಕಾಗಿ ಪ್ರಾರ್ಥಿಸುತ್ತೇನೆ. ನಾನು ಈ ಕೆಳಗಿನ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೇನೆ.

ದಿಃ 26.04.1993ರ ಖರೀದಿ ಪತ್ರ ಎಂದು ನಮೂದು ಇರುವ ದಾಖಲೆ ಹಾಜರುಪಡಿಸಿದ್ದು ಅದನ್ನು ಸಂಪೂರ್ಣವಾಗಿ ಓದಿ ನೋಡಲಾಗಿ ಅದರಲ್ಲಿ ಖರೀದಿ ಆದ ಬಗ್ಗೆ ನಮೂದು ಇಲ್ಲದಿದ್ದ ಕಾರಣ ಅದನ್ನು ಕರಾರು ಪತ್ರ ಎಂದು ಪರಿಗಣಿಸಿ ವಾದಿ ಪರ ವಕೀಲರ ತಕರಾರಿಗೆ ಮತ್ತು ಅದನ್ನು ಸಾಬೀತುಪಡಿಸುವ ಷರತ್ತಿಗೊಳಪಟ್ಟು ನಿಡಿ-1 ಎಂದು ಗುರುತಿಸಲಾಯಿತು. ಸರ್ವೆ ನಂಬರ್ 418ರ ಕೈ ಬರಹದ 4 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-5 ಎಂದು ಗುರುತಿಸಲಾಯಿತು. ಸರ್ವೆ ನಂಬರ್ 70ರ 8 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-6 ರಿಂದ 13 ಎಂದು ಗುರುತಿಸಲಾಯಿತು. ಭೂಸ್ವಾಧೀನ ಕಾಯಿದೆಯಡಿಯಲ್ಲಿ ನೀಡಿದ ಸಾರ್ವಜನಿಕ ಸೂಚನೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-14 ಎಂದು, ಭೂಸ್ವಾಧೀನ ಕಾಯಿದೆಯಡಿಯಲ್ಲಿ ನೀಡಿದ ನೋಟೀಸು ವಾದಿ ಮತ್ತು ಪ್ರತಿವಾದಿಗೆ ತಲುಪಿದ ಬಗ್ಗೆ ನೀಡಿದ ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ನಿಡಿ-15 ಎಂದು, LAC No.532/2002 ನೇದರ ತೀರ್ಪಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-16 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.